ಪ್ರತಿಬಿಂಬ

PRATIBIMBA –Multidisciplinary Kannada Research Journal of IIMRD
ISSN: 2582-2284
Vol-7 Issue-4, January - February 2026, Pp. 38-47
©*IIMRD*, Mysuru
IIMRD JOURNALS
www.iimrd.com

ಬಿಸಿಲು ನಾಡಿನ ಕಥೆಗಳಲ್ಲಿ ಸಾಮಾಜಿಕ ಪ್ರಜ್ಞೆಯ ತಾತ್ವಿಕ ನೆಲೆಗಳು

ಡಾ. ಮಂಜುನಾಥ ಎಂ. ಕರಿಲಿಂಗಣ್ಣವರ
ಸಂಶೋಧಕರು, ಕನ್ನಡ ವಿಶ್ವವಿದ್ಯಾಲಯ ಹಂಪಿ, ವಿದ್ಯಾರಣ್ಯ

ಸಾರಾಂಶ: (Abstract)

ಸಾಹಿತ್ಯದಲ್ಲಿ ಸಾಮಾಜಿಕ ಪ್ರಜ್ಞೆಯ ಹುಡುಕಾಟ ಎನ್ನುವುದು ಸಾಹಿತ್ಯ ಮೀಮಾಂಸೆಯ ಭಾಗವಾಗಿರುವಂತೆ ಲೋಕ ಮೀಮಾಂಸೆಯ ಭಾಗವೂ ಹೌದು. ಯಾವುದೇ ರೀತಿಯ ಲೋಕ ಮೀಮಾಂಸೆಯು ಜೀವನ ಮೀಮಾಂಸೆಯ ಮೂಲ ನೆಲೆಯಿಂದಲೇ ರೂಪ ಪಡೆಯುತ್ತದೆ. ಸಮಾಜವೊಂದರ ವಿಶಿಷ್ಟತೆಯ ಬಗ್ಗೆ ತನ್ನತನದ–ಅನ್ಯತನದ ಬಗೆಗೆ ಯಾವಾಗ ಚಿಂತನೆ ಶುರುವಾಗುತ್ತದೆ ಎಂಬುದನ್ನು ವಿಶ್ಲೇಷಿಸುವುದು ತೀರ ಜಟಿಲವಾದ ಕೆಲಸ. ಚಲನಶೀಲವಾದ ಸಮಾಜದ ಚಹರೆಗಳು ಒಂದೇ ರೂಪದಲ್ಲಿ ಇರುತ್ತವೆ ಎಂದು ನಿರ್ಧಾರಕ್ಕೆ ಬರುವುದೇ ಅಪಾಯ. ನಿರ್ದಿಷ್ಟ ಕಾಲಘಟ್ಟದಲ್ಲಿಯೇ ಒಂದು ಪ್ರದೇಶದಲ್ಲಿ ಭಿನ್ನ ಬಗೆಯ ಚಿಂತನ ಧಾರೆಗಳು ಇರುತ್ತವೆ ಮತ್ತು ಅವು ಪರಸ್ಪರ ಮುಖಾಮುಖಿಗೊಳ್ಳುತ್ತಿರುತ್ತವೆ. ಇವುಗಳ ಅನುಸಂಧಾನವನ್ನು ನಡೆಸುವುದು ಒಟ್ಟಾರೆ ಒಂದು ಬಹುತ್ವದ ಆವರಣದಲ್ಲಿ ಪ್ರವೇಶಿಸಿದ ಹಾಗೆಯೇ. ಪ್ರಭುತ್ವ, ಧರ್ಮ ಮತ್ತು ಸಾಮಾಜಿಕ ನಂಬಿಕೆಗಳು ಏಕೀಭವಿಸಿ ಒಂದು ಸಾಂಸ್ಕೃತಿಕ ಚಹರೆಯನ್ನು ನಿರ್ಮಿಸಿಕೊಳ್ಳುತ್ತವೆ. ಇವುಗಳನ್ನು ಸೃಜನಶೀಲ ಅಭಿವ್ಯಕ್ತಿ ಕ್ರಮಗಳು ಹೇಗೆ ಗ್ರಹಿಸಿವೆ ಎನ್ನುವ ಪ್ರಕ್ರಿಯೆಗಳನ್ನು ಈ ಲೇಖನದಲ್ಲಿ ಗುರುತಿಸಲಾಗುವುದು. 'ಸಣ್ಣ ಕಥೆಗಳು' ಪ್ರಕಾರವನ್ನು ಆಧರಿಸಿ ಕೆಲವು ಪ್ರಮೇಯಗಳನ್ನು ಈ ಲೇಖನ ಮಂಡಿಸುತ್ತದೆ. ಇದರ ವ್ಯಾಪ್ತಿ ಬಿಸಿಲು ನಾಡು ಎಂದು ಕರೆಸಿಕೊಳ್ಳುವ ಈಶಾನ್ಯ ಕರ್ನಾಟಕ ಭಾಗ.

ಮುಖ್ಯಪದಗಳು (Keywords): *ಕನ್ನಡ ಸಾಹಿತ್ಯ, ಬಿಸಿಲು ನಾಡು, ಸಾಮಾಜಿಕ ಪ್ರಜ್ಞೆ, ತಾತ್ವಿಕ ನೆಲೆ*

ಪೀಠಿಕೆ

ಸಮಾಜ ತನ್ನ ಸ್ವ–ಅಸ್ತಿತ್ವಕ್ಕೆ ಆಳವಾದ ಸಂದಿಗ್ಧ ಒದಗಿದಾಗ ತನ್ನ ಅಂತರಂಗದಲ್ಲಿ ಎರಡು ರೀತಿಯ ತಲ್ಲಣಗಳನ್ನು ಅನುಭವಿಸುತ್ತದೆ. ಒಂದು, ಆ ಸಂಧಿ ಕಾಲದ ಪರಿಸ್ಥಿತಿಯನ್ನು ಸಹಿಸುವುದು. ಮತ್ತೊಂದು ಅದನ್ನು ಮೀರಲು ತೀವ್ರವಾಗಿ ವಿರುದ್ಧ ದಿಕ್ಕಿನಲ್ಲಿ ಮುಖಾಮುಖಿಗೊಂಡು ಪರ್ಯಾಯವನ್ನು ಹುಟ್ಟುಹಾಕಿಕೊಳ್ಳುವುದು. ಸೃಜನಶೀಲ ಸನ್ನಿವೇಶಗಳಲ್ಲಿ ಈ ತರದ ಚರ್ಚೆಗಳು ಇನ್ನಷ್ಟು ಸೂಕ್ಷ್ಮವಾದ ಆಯಾಮಗಳನ್ನು ಪಡೆದುಕೊಳ್ಳುತ್ತವೆ. ಬಿಸಿಲು ನಾಡು ಪ್ರದೇಶದ ಸೃಜನಶೀಲ ಸಾಹಿತ್ಯ ತನ್ನ ಸ್ವಯಂಪೂರ್ಣ ಸ್ಥಿತಿಯಲ್ಲಿಯೇ ಒಟ್ಟಾರೆ ಕನ್ನಡದ ಸಮಗ್ರ ನೆಲೆಯಲ್ಲಿ ಸೃಜನಶೀಲ ಸ್ಥಿತಿಯೊಂದಿಗೆ ಅಪೇಕ್ಷಣೀಯವಾಗಿರುವುದು ಸ್ಪಷ್ಟ. ಇದು ಎಲ್ಲ ಕಾಲಕ್ಕೂ ಹೊಸದಕ್ಕೆ ಅನ್ಯಕ್ಕೆ ತನ್ನನ್ನು ತಾನು ಒಡ್ಡಿಕೊಳ್ಳುವ

Please cite this article as: ಮಂಜುನಾಥ ಎಂ. ಕರಿಲಿಂಗಣ್ಣವರ. (2026). ಬಿಸಿಲು ನಾಡಿನ ಕಥೆಗಳಲ್ಲಿ ಸಾಮಾಜಿಕ ಪ್ರಜ್ಞೆಯ ತಾತ್ವಿಕ ನೆಲೆಗಳು. ಪ್ರತಿಬಿಂಬ: *ಮಲ್ಟಿಡಿಸಿಪ್ಲಿನರಿ ಕನ್ನಡ ರೀಸರ್ಚ್ ಜರ್ನಲ್ ಆಫ್ ಐಐಎಂಆರ್‌ಡಿ, 7(4). ಪು.ಸಂ.* 38–47

ಗುಣವಾಗಿದೆ. ಈ ಪ್ರದೇಶದ ಸಾಹಿತ್ಯ ಪರಂಪರೆಯೊಂದಿಗೆ ಬೆಸೆದ ಒಂದು ಸಾಮಾಜಿಕ ಜೀವನ ದರ್ಶನ ಪ್ರಾರಂಭದಿಂದಲೂ ಒಳಸುಳಿಯಾಗಿ ಹರಿಯುತ್ತಿದೆ. ಕುತೂಹಲದ ಸಂಗತಿ ಎಂದರೆ ಕೆಲವು ಸಂದರ್ಭಗಳಲ್ಲಿ ಇಲ್ಲಿನ ಜೀವನ ದರ್ಶನ ಕನ್ನಡದ ಸೃಜನಶೀಲ ಪರಂಪರೆಯ ಒಟ್ಟಾರೆ ಜೀವನ ದರ್ಶನವಾಗಿ ರೂಪುಗೊಂಡಿದೆ.

ಸಾಂಸ್ಕೃತಿಕವಾಗಿ ಶ್ರೀಮಂತವಾದ ಬಿಸಿಲು ನಾಡಿನ ಪರಂಪರೆಯು ಕನ್ನಡ ಸಾಹಿತ್ಯ ಚರಿತ್ರೆಯಲ್ಲಿ ಹಲವು ಭಿನ್ನ ಧಾರೆಗಳಿಗೆ ಕನ್ಯೆ ನೆಲವಾಗಿ ಒದಗಿ ಬಂದಿದೆ. ಈ ನಾಡಿನಲ್ಲಿ ಅಗೆದಂತೆ ಸಾಹಿತ್ಯ ಗಣಿಯಿಂದ ಅಪರೂಪದ ರತ್ನಗಳು ಕಾಣಸಿಗುತ್ತವೆ. ಇದಕ್ಕೆ ಚರಿತ್ರೆಯಲ್ಲಿ ನಡೆದ ಅನೇಕ ಘಟನೆಗಳು ಕಾರಣ. ಮೊದಲಿನಿಂದಲೂ ಕೃಷ್ಣ ಮತ್ತು ತುಂಗಭದ್ರ ನದಿಗಳ ನಡುವಿನ ಪ್ರದೇಶವನ್ನು ಸಂಪತ್ಭರಿತ 'ದೋ ಅಬ್' ಪ್ರದೇಶ ಎಂದು ಗುರುತಿಸಲಾಗಿತ್ತು. ಇದಕ್ಕಾಗಿ ಅನೇಕ ರಾಜರು ಯುದ್ಧಗಳನ್ನು ಮಾಡಿದ್ದಾರೆ. ನಿರಂತರ ಈ ಪ್ರದೇಶದ ಸಂಪತ್ತನ್ನು ಪ್ರಭುತ್ವಗಳು ಅನುಭವಿಸಿವೆ. ವಿಜಯನಗರದ ಅರಸರು ಮತ್ತು ಬಹುಮನಿ ಸುಲ್ತಾನರು ಈ ನೆಲಕ್ಕಾಗಿ ಹೋರಾಡಿರುವುದು ಚರಿತ್ರೆಯಲ್ಲಿ ದಾಖಲಾಗಿದೆ. ಅದಷ್ಟೇ ಅಲ್ಲದೆ ಇಲ್ಲಿನ ಜನಜೀವನ ಅನೇಕ ರಾಜರ, ಪಾಳೇಪಟ್ಟುಗಳ, ಸಂಸ್ಥಾನಗಳ ಆಕ್ರಮಣಗಳಿಂದ ಅಸ್ಥಿರತೆಯನ್ನು, ಅಭದ್ರತೆಯನ್ನು ಮತ್ತು ಅರಾಜಕತೆಯನ್ನು ಅನುಭವಿಸಿದೆ. ಹಾಗಾಗಿಯೇ ನಿತ್ಯಚಲನಶೀಲ ಗುಣವೊಂದು ಇಲ್ಲಿನ ಬದುಕಲ್ಲಿ ಹಾಸುಹೊಕ್ಕಿದೆ ಕೂಡ. ಆಗಾಗ ಈ ಪ್ರದೇಶ ದುರಿತಕಾಲವನ್ನು ಸಹಿಸಲು ಅಥವಾ ಮೀರಲು ಅನೇಕ ರೀತಿಯ ಚಳುವಳಿಗಳನ್ನು ಹುಟ್ಟುಹಾಕಿದೆ. ಕರ್ನಾಟಕದಲ್ಲಿ ಎಲ್ಲೂ ನಡೆಯದ ಚಾರಿತ್ರಿಕ ಅಂಶಗಳು ಈ ನೆಲದಲ್ಲಿ ಸಂಭವಿಸಿವೆ. ಕುತೂಹಲಕ್ಕೆ ನೋಡಿದರೆ ಸ್ವಾತಂತ್ರ ಪೂರ್ವ ಕನ್ನಡ ಸಾಹಿತ್ಯದ 'ನೆಲೆ' ಎಂದರೆ ಅದು ಈಶಾನ್ಯ ಭಾಗದ ಬೀದರ್, ಗುಲಬರ್ಗಾ ಮತ್ತು ರಾಯಚೂರು ಎಂಬ ಮೂರು ಜಿಲ್ಲೆಗಳಲ್ಲಿ ಹಂಚಿಹೋದ ಪ್ರದೇಶವಾಗಿತ್ತು. ಹಿಂದೆ ಹೈದರಾಬಾದ್ ಕರ್ನಾಟಕ ಎಂದು ಕರೆಸಿಕೊಳ್ಳುತ್ತಿದ್ದ ಈ ನಾಡು ನಂತರ ಬೀದರ್, ಕಲಬುರ್ಗಿ, ರಾಯಚೂರು, ಯಾದಗಿರಿ, ಕೊಪ್ಪಳ, ವಿಜಯನಗರ ಮತ್ತು ಬಳ್ಳಾರಿ ಸೀಮೆಯವರೆಗೆ ಪ್ರಸ್ತುತ ಎಂಟು ಜಿಲ್ಲೆಗಳಾಗಿ ವಿಸ್ತರಿಸಿದೆ. ಈ ಜಿಲ್ಲೆಗಳ ಕತೆಗಾರರ ಸಣ್ಣ ಕಥೆಗಳನ್ನು ಅಧ್ಯಯನಕ್ಕೆ ಒಳಪಡಿಸುವ ಮೂಲಕ ಅವರ ಸಣ್ಣ ಕಥೆಗಳ ಸಮಾಜಮೀಮಾಂಸೆ ಮತ್ತು ಕಲಾಮೀಮಾಂಸೆಯನ್ನು ಅನ್ವೇಷಣೆ ಮಾಡಲಾಗುವುದು. ಹೈದರಾಬಾದ್ ಕರ್ನಾಟಕ ಪ್ರದೇಶದಲ್ಲಿ ಸಿದ್ದಯ್ಯ ಪುರಾಣಿಕ, ಜಯತೀರ್ಥ ರಾಜಪುರೋಹಿತ, ಶಿವಲೆಂಕ, ಸಗರ ಕೃಷ್ಣಾಚಾರ್ಯ, ಅಮರಾನಂದ ಬೆಟ್ಟದೂರು, ದೇವೇಂದ್ರ ಕುಮಾರ ಹಕಾರಿ, ಚಂದ್ರಕಾಂತ ಕುಸುನೂರು, ಪಂಚಾಕ್ಷರಿ ಹಿರೇಮಠ, ಶಾಂತರಸ, ರಾಜಶೇಖರ ನೀರಮಾನ್ವಿ, ಬಾಲಚಂದ್ರ ಜಯಶೆಟ್ಟಿ, ಚೆನ್ನಣ್ಣ ವಾಲಿಕಾರ, ಗೀತಾ ನಾಗಭೂಷಣ, ಕೋರಗಲ್ಲ ವಿರೂಪಾಕ್ಷಪ್ಪ, ಸರಿತಾ ಕುಸುಮಕರ ದೇಸಾಯಿ, ಮಲ್ಲಿಕಾರ್ಜುನ ಹಿರೇಮಠ, ಬಿ.ಟಿ. ಲಲಿತನಾಯಕ, ಸುಗಯ್ಯ ಹಿರೇಮಠ, ಶಿವಕುಮಾರ ನಾಗವಾರ, ರಾಜಶೇಖರ ಹತಗುಂದಿ, ಶರಣಪ್ಪ ವಡಿಗೇರ, ಶ್ರೀಕಾಂತ ಪಾಟೀಲ, ಸಿದ್ದರಾಮ ಹೊನ್ಕಲ್, ಚಂದ್ರಶೇಖರ ಕಂಠಿ, ಗುರುನಾಥ ಅಕ್ಕಣ್ಣ ಗೂರ್ಟ, ಸಂಧ್ಯಾ ಹೊನಕುಂಟೆಕರ್, ಲಕ್ಷ್ಮೀದೇವಿ ಶಾಸ್ತ್ರಿ, ಲಲಿತಾ ದೇಮಶೆಟ್ಟಿ, ಜ್ಯೋತಿ ಬಿ. ಕುಲಕರ್ಣಿ, ಚಿತ್ರಶೇಖರ ಕಂಠಿ, ವಿಸಾಜಿ ಜಿ.ಬಿ., ಶಂಕರಯ್ಯ ಆರ್. ಘಂಟಿ, ಕಲಿಗಣನಾಥ ಗುಡದೂರು, ಅಮರೇಶ ನಗುಡೋಣಿ, ಎಚ್.ಟಿ. ಪೋತೆ, ಚಿದಾನಂದ

ಸಾಲಿ, ಮಹಾಂತೇಶ ನವಲ್ಕಲ್, ಅಮರೇಶ ಗಿಣಿವಾರ, ಶರಣಬಸವ ಕೆ.ಗುಡದಿನ್ನಿ, ಶೋಭಾ ಗುನ್ನಾಪೂರ, ನಾಗರಾಜ ಕೋರಿ, ಮುದಿರಾಜ ಬಾಣದ ಮುಂತಾದ ಕತೆಗಾರರು ಕಥಾರಚನೆಯಲ್ಲಿ ತೊಡಗಿದವರಾಗಿದ್ದಾರೆ. ಈ ನೆಲದ ಕತೆಗಳ ಸಾಮಾಜಿಕ ಪ್ರಜ್ಞೆಯನ್ನು ಗ್ರಹಿಸಲು ಕೆಲವು ಪ್ರಾತಿನಿಧಿಕ ಕಥೆಗಳನ್ನು ಇಲ್ಲಿ ಅಧ್ಯಯನಕ್ಕೆ ಒಳಪಡಿಸಲಾಗಿದೆ.

ಪ್ರಗತಿಶೀಲ ಸಾಹಿತ್ಯ ಚಳುವಳಿಯ ಪ್ರಭಾವಗಳು ಈ ಪ್ರದೇಶದ ಸಾಹಿತಿಗಳ ಮೇಲೆ ಪ್ರಾರಂಭದಲ್ಲಿ ಆಗಿರುವುದು ಕುತೂಹಲದ ಸಂಗತಿ. “ಮಾನವೀಯತೆಗಾಗಿ ಕಲೆ”, “ಮಾನವ ಬದುಕಿಗಾಗಿ ಕಲೆ” ಎಂಬುದು ಪ್ರಗತಿಶೀಲ ಸಾಹಿತ್ಯ ಮನೋಭಾವಾಗಿತ್ತು. ೧೯ನೆಯ ಶತಮಾನದಲ್ಲಿ ಪಾಶ್ಚಿಮಾತ್ಯ ದೇಶಗಳಲ್ಲಿ ವೈಜ್ಞಾನಿಕ, ಕೈಗಾರಿಕಾ ಕ್ರಾಂತಿಯಿಂದ ರಾಜಕೀಯವಾಗಿ, ಧಾರ್ಮಿಕವಾಗಿ, ಸಾಮಾಜಿಕವಾಗಿ ಸ್ಥಿತ್ಯಂತರಗಳಾದ ಪರಿಣಾಮವಾಗಿ ಸಮಾಜದಲ್ಲಿ ಎರಡು ಪ್ರಮುಖ ವರ್ಗಗಳು ಒಡೆದು ಕಾಣಿಸಿಕೊಂಡವು. ಬಂಡವಾಳಗಾರರು, ಶ್ರಮಿಕರ ನಡುವೆ ಸಾಮಾಜಿಕ ಮತ್ತು ಮುಖ್ಯವಾಗಿ ಆರ್ಥಿಕ ಅಸಮಾನತೆ ಇದ್ದಂತ ಸಂದರ್ಭದಲ್ಲಿ ‘ವರ್ಗರಹಿತ ಸಮಾಜ’ ನಿರ್ಮಾಣಕ್ಕಾಗಿ ಕಾರ್ಲ್ ಮಾರ್ಕ್ಸ್ ಬರಹಗಳು ದುಡಿದವು. ರಷ್ಯಾದಲ್ಲಿ ೧೯೧೭ರ ಕ್ರಾಂತಿಯ ನಂತರ ಸಮಾಜಕ್ಕೆ ಸ್ಫೂರ್ತಿ ನೀಡುವುದೇ ಕಲೆಯ, ಸಾಹಿತ್ಯದ ಉದ್ದೇಶ ಎಂಬ ಅಭಿಪ್ರಾಯ ‘ಸಾಮಾಜಿಕ ವಾಸ್ತವವಾದ’ಕ್ಕೆ ಪ್ರೇರಣೆಯಾಯಿತು. ಭಾರತದಲ್ಲಿ ಸಜ್ಜದ ಜಾಹಿರ್, ಮುಲ್ಕರಾಜ್ ಆನಂದ್, ಪ್ರೇಮಚಂದ್ ಮುಂತಾದವರಿಂದ ಈ ಚಳವಳಿ ರೂಪಗೊಂಡು ಅನಕೃ ಅವರ ಅಧ್ಯಕ್ಷತೆಯಲ್ಲಿ ಕನ್ನಡ ನಾಡಿನಲ್ಲಿ ೧೯೪೩ರಲ್ಲಿ ಕುಡಿಯೊಡೆಯಿತು. ಈ ಲೇಖಕರು ‘ಸಮಾಜವಾದ’ವನ್ನು ಸಾಹಿತ್ಯದ ಮೂಲಕ ಪ್ರತಿಪಾದಿಸ ತೊಡಗಿದರು. ಸಾಹಿತಿ, ಕಲಾವಿದರಿಗೆ ಸಮಾಜದ ಉದ್ಧಾರವೇ ಪ್ರಧಾನ ಗುರಿಯಾಗಿರಬೇಕೆಂದು ‘ಮಾನವನ ಬದುಕಿಗೆ ಕಲೆ’ ಎಂಬ ಧ್ಯೇಯ ಇಟ್ಟುಕೊಂಡು ಶೋಷಣೆ, ಅಜ್ಞಾನ, ಮೂಢನಂಬಿಕೆ, ಅಸಮಾನತೆ ಮುಂತಾದವುಗಳನ್ನು ವಿರೋಧಿಸಿ ಕೃತಿ ರಚನೆಗೆ ತೊಡಗಿದರು. ಪ್ರಗತಿಶೀಲ ಬರಹಗಾರರು ನಾಡಿನ ತುಂಬಾ ಓಡಾಡಿದರು. ಅಂತಹ ಸಂದರ್ಭದಲ್ಲಿ ಹೈದರಾಬಾದ್ ಪ್ರಾಂತ್ಯದಲ್ಲಿ ಈ ಸಾಹಿತ್ಯ ಚಳುವಳಿಯ ಜೊತೆಗೆ ಭಾವನಾತ್ಮಕ ಸಂಬಂಧವು ಏರ್ಪಟ್ಟಿತು. ಇದಕ್ಕೆ ಹೈದ್ರಾಬಾದ್ ಕರ್ನಾಟಕದ ರಾಜಕೀಯ ಸಾಮಾಜಿಕ ಪರಿಸ್ಥಿತಿಗೂ ಪ್ರಗತಿಶೀಲ ಚಳುವಳಿಯ ರಾಜಕೀಯ ಮತ್ತು ಸಾಮಾಜಿಕ ದೃಷ್ಟಿಕೋನಕ್ಕೂ ಒಳಸಂಬಂಧಗಳಿದ್ದವು. “ಒರೆಗಲ್ಲು” ೧೯೫೩, “ಸನ್ಮಾನ” ೧೯೬೮ ಎಂಬ ಆಂಥ್ಯಾಲಜಿಗಳು ಇದಕ್ಕೆ ಸಾಕ್ಷಿಯಾಗಿವೆ. ನರಸಿಂಹ ಕಠಾರಿ, ಕುಮಾರಿ ಸುಶೀಲಾ ಬಾಡಗಂಡಿ, ವಾಗೀಶ್ವರಿ ನಾರಾಯಣ, ಎಚ್.ಜಿ. ಕುಲಕರ್ಣಿ, ಶಾಮಪ್ರಸಾದ ಮುದ್ಗಲ್, ಶಾಂತಾ ಚಿಂಚೋಳಿ, ಗುರುನಾಥ ರೆಡ್ಡಿ ಪರ್ವತಾಬಾದ, ವಸುಂಧರಾ ಕಲಬುರ್ಗಿ, ಅನಂತ ಹರಸೂರು, ಬೆಳಗೆರೆ ಪಾರ್ವತೆಮ್ಮ ಮುಂತಾದವರು ಬರೆದ ಒಂದೊಂದು ಕಥೆಗಳು ‘ಒರೆಗಲ್ಲು’ (೧೯೫೩) ಕಥಾಸಂಕಲನದಲ್ಲಿ ಸೇರಿವೆ. ಆದರೆ ಇವರ ಬರವಣಿಗೆ ಮುಂದುವರೆದ ಬಗ್ಗೆ ದಾಖಲೆಗಳಿಲ್ಲ. ಹೈದರಾಬಾದ್ ಕರ್ನಾಟಕದ ಕಲಬುರ್ಗಿಗೆ ಅನಕೃ ಬರುವರೆಂದು ತಿಳಿದ ಈ ಭಾಗದ ಲೇಖಕರು ಅವರಿಗೆ ಅರ್ಪಿಸಲು ತಮ್ಮ ತಮ್ಮ ಕಥೆಗಳನ್ನು ಒಂದೇ ಕೃತಿಯಲ್ಲಿ ಸಂಕಲಿಸಿ ಅದಕ್ಕೆ "ಸನ್ಮಾನ" ಎಂದು ಹೆಸರಿಟ್ಟು ಅದನ್ನು ಅವರಿಗೆ ಅರ್ಪಿಸಿದರು. ಇದಕ್ಕೂ ಮುನ್ನ

ರಾಯಚೂರು ಭಾಗದಿಂದ ೧೯೪೭ರಲ್ಲಿ ಹೊರಬಂದ "ಮುಸುಕು ತೆರೆ" ಎಂಬ ಸಂಕೀರ್ಣ ಕೃತಿಯಲ್ಲಿಯೇ ಪ್ರಗತಿಶೀಲ ಪ್ರಭಾವ ಒಡೆದು ಕಾಣುತ್ತಿತ್ತು.

ಸ್ವಾತಂತ್ರ್ಯ ಹೋರಾಟದಲ್ಲಿ ಕರ್ನಾಟಕದಲ್ಲಿ ಸಂಭವಿಸಿದ ರಾಜಕೀಯ ಮತ್ತು ಸಾಮಾಜಿಕ ಬದಲಾವಣೆಗಳಿಂದ ಉಂಟಾದ ಪರಿಣಾಮಗಳು ಜನ ಬದುಕಿನ ಮೇಲೆ ತಲೆಮಾರಿನಿಂದ ತಲೆಮಾರಿಗೆ ವಿಸ್ತರಿಸಿವೆ. ಪ್ರಾರಂಭದಲ್ಲಿ ದೇಶ ಪ್ರಾಂತ್ಯಗಳ ವಿಭಜನೆಯ ಸಂದರ್ಭದಲ್ಲಿ ಅದೊಂದು ಶಾಪವಾಗಿ ಪರಿಣಮಿಸಿತು. ಜಾತಿ, ಮತ, ಧರ್ಮ, ಭಾಷೆ, ನಾಡು ಮುಂತಾದ ಹೆಸರುಗಳಲ್ಲಿ ಉಂಟಾದ ರಾಜಕೀಯ ಗಲಭೆಗಳು ಜನ ಸಮುದಾಯಗಳನ್ನು ಇಕ್ಕಟ್ಟಿಗೆ ಸಿಲುಕಿಸಿದವು. ಇಂತಹ ವಸ್ತುಗಳನ್ನು 'ಒರೆಗಲ್ಲು' (ದೇವೇಂದ್ರ ಕುಮಾರ್ ಹಕಾರಿ) 'ನಿರಾಶ್ರಿತೆ' (ಶಿವಲೆಂಕ) 'ಟೊಳ್ಳು ಬುರುಜು' (ಸರಿತಾ ಕುಸುಮಾಕರ) 'ಮುಂದೇನು' ಮತ್ತು 'ಜಾನ್ ಷಣ್ಮುಗನ್' (ಜಯತೀರ್ಥ ರಾಜಪುರೋಹಿತ) ಮುಂತಾದವರ ಕಥೆಗಳು ಒಳಗೊಂಡಿವೆ. ೧೯೪೭ರಲ್ಲಿ ಭಾರತಕ್ಕೆ ರಾಜಕೀಯ ಸ್ವಾತಂತ್ರ್ಯಣ ಬಂತು. ಈ ಸಂದರ್ಭದಲ್ಲಿ ಅನೇಕ ಸಂಸ್ಥಾನಗಳು ಭಾರತದ ಪ್ರಜಾಪ್ರಭುತ್ವ ಒಕ್ಕೂಟ ವ್ಯವಸ್ಥೆಯನ್ನು ಸೇರಿಕೊಂಡವು. ಆದರೆ ಹೈದರಾಬಾದ್ ಸಂಸ್ಥಾನವನ್ನು ಆಳುತ್ತಿದ್ದ ನಿಜಾಮ ಇದಕ್ಕೆ ಸಮ್ಮತಿಸಲಿಲ್ಲ. ಅದು ಸ್ವತಂತ್ರವಾಗಿರಬೇಕು ಅದನ್ನು ನಿಜಾಮ ಆಳಬೇಕು ಎಂಬ ನಿಲುವು ಕೆಲವು ಸಂಘಸಂಸ್ಥೆಗಳಿಗೆ ಇತ್ತು. ಈ ಸಂದರ್ಭದಲ್ಲಿ ವಿಮೋಚನಾ ಹೋರಾಟ ಶುರುವಾಯಿತು. 'ಕಾಶಿಂ ರಜ್ವಿ' ಎಂಬ ವ್ಯಕ್ತಿ ನಿಜಾಮನ ಬೆಂಬಲದೊಂದಿಗೆ 'ರಜಾಕಾರರ' ಒಂದು ಪಡೆಯನ್ನು ಕಟ್ಟಿದ. ಎಲ್ಲಾ ಸಂಘಸಂಸ್ಥೆಗಳ ಶಕ್ತಿಯನ್ನು ಬಳಸಿಕೊಂಡು ವಿಮೋಚನೆಗಾಗಿ ಹೋರಾಡುವವರ ಮೇಲೆ ದಾಳಿ ನಡೆಸಿದ. ಸ್ಥಳೀಯ ಮುಸ್ಲಿಮರಲ್ಲಿ ಮತೀಯ ಭಾವನೆಯನ್ನು ಹೆಚ್ಚಿಸಿದ. ರಾಜಕೀಯ ಬೆಂಬಲದಿಂದ ಮತಾಂತರಕ್ಕೆ ಪ್ರಚೋದಿಸಿದ. ಮಾಸ್ತಿ 'ಸುಶೀಲಾ', 'ರಜಾಕಾರ' ಎಂಬ ಕತೆಗಳನ್ನು ಲಂಕೇಶ್ 'ದಾಳಿ' ಎಂಬ ಕತೆಯನ್ನು 'ರಜಾಕಾರರ' ದಾಳಿಯನ್ನು ಕೇಂದ್ರವಾಗಿಟ್ಟುಕೊಂಡು ಬರೆದಿರುವುದು ಕುತೂಹಲ ಎನಿಸುತ್ತದೆ. ಶಾಂತರಸರ 'ಬಡೇಸಾಬು ಪುರಾಣ' ಎಂಬ ಕತೆ ಒಂದು ಹಳ್ಳಿಯನ್ನು ಕೇಂದ್ರವಾಗಿಟ್ಟುಕೊಂಡಿದೆ. ಸ್ವಾತಂತ್ರ್ಯ ಹೋರಾಟ ಸಂದರ್ಭದಲ್ಲಿ ರಜಾಕಾರರು ಹೇಗೆ ಹುಟ್ಟಿಕೊಂಡರು? ಅವರ ಗುರಿ ಯಾವುದಿತ್ತು? ಅದನ್ನು ತಲುಪಲು ನಡೆಸಿದ ಕಾರ್ಯಗಳ ಸ್ವರೂಪ ಎಂತದ್ದು? ಅದರ ಪರಿಣಾಮವೇನಾಯಿತು? ಎಂಬ ಚಿತ್ರಣ ಈ ಕತೆಯಲ್ಲಿದೆ. ವ್ಯಾಪಾರಕ್ಕೆ ಬಂದ ಬಡೇಸಾಬು ಇದ್ದಕ್ಕಿದ್ದ ಹಾಗೆ ತನ್ನ ಜಾತಿಯವರನ್ನು ಕರೆದು 'ನಮ್ಮದು ಆಳುವ ಜಾತಿ, ರಾಜ ನಮ್ಮವ, ದೇಶ ನಮ್ಮದು, ನಾವು ಯಾರಿಗೂ ತಲೆಬಗ್ಗಿಸಬಾರದು, ನಮ್ಮ ಧರ್ಮ ಶ್ರೇಷ್ಠವಾದ ಧರ್ಮ, ಇದಕ್ಕಾಗಿ ಪ್ರಾಣ ಕೊಡಬೇಕು' ಎಂದು ಮತೀಯ ಭಾವನೆಯನ್ನು ಪ್ರಚೋದಿಸುತ್ತಾನೆ. ಬಡೇಸಾಬನ ಕುತಂತ್ರ ಜನತೆ ಅರಿಯುವ ಹೊತ್ತಿಗೆ ರಜಾಕಾರರ ದಾಳಿ ಶುರುವಾಗುತ್ತದೆ. ತಾನು ದುರ್ಬಲನಾಗುತ್ತಿದ್ದೇನೆ ಅನ್ನಿಸಿದಾಗ ರಜಾಕಾರನಾಗಿ ಪುನಃ ಚಾಲ್ತಿಗೆ ಬರುತ್ತಾನೆ. ಅನೇಕ ಕೆಳವರ್ಗದವರನ್ನು ರಜಾಕಾರರನ್ನಾಗಿ ಮಾಡುತ್ತಾನೆ. ಊರಲ್ಲಿ ತನ್ನ ಬಗ್ಗೆ ಅಸಮಾಧಾನ ಇಟ್ಟುಕೊಂಡಿದ್ದವರ ಮೇಲೆ ದೌರ್ಜನ್ಯ ನಡೆಸುತ್ತಾನೆ. ಆಗ ಊರಿನ ಆಂತರಿಕ ವ್ಯವಸ್ಥೆಯಲ್ಲಿನ ಜಗಳ, ವೈಷಮ್ಯ, ಸೇಡು ಸೇರಿಕೊಂಡು ಅದು ಹೆಚ್ಚಾಗಿ ಅತ್ಯಾಚಾರಗಳು, ದರೋಡೆ, ಲೂಟಿ, ಕೊಲೆ ನಡೆದು ಊರು ತಲ್ಲಣಿಸಿಹೋಗುತ್ತದೆ. ಶಾಂತರಸರು 'ಉರಿದ ಬದುಕು', 'ನಾಯಿ ಮತ್ತು ಪಿಂಚಣಿ',

'ಸ್ವಾತಂತ್ರ್ಯವೀರ' ಎಂಬ ಕತೆಗಳಲ್ಲಿ ರಜಾಕಾರರ ದಾಳಿಯ ಮತ್ತಷ್ಟು ಮಗ್ಗುಲಗಳನ್ನು ಚಿತ್ರಿಸಿದ್ದಾರೆ. ಹಾಗೆಯೇ ಜಯತೀರ್ಥ ರಾಜಪುರೋಹಿತರ 'ಯಾರು ನಮ್ಮವರು', 'ಸಯಿದಾ ಸುಮತಿಯಾದಳು' ಸಗರ ಕೃಷ್ಣಾಚರ್ಯರ 'ಆದರ್ಶ' ಶ್ರೀಕಾಂತ್ ಪಾಟೀಲರ 'ಸಂಬಂಧ' ಕತೆಗಳು ಈ ರಜಾಕಾರರ ದಾಳಿಯ ವಸ್ತುಗಳನ್ನು ಒಳಗೊಂಡಿವೆ.

ಈ ಕತೆಗಳಲ್ಲಿ ಸಾಮಾಜಿಕ ರಾಜಕೀಯ ಮತ್ತು ಧಾರ್ಮಿಕ ಕಾರಣಗಳು ಮನುಷ್ಯನ ಜೀವನದಲ್ಲಿ ನೇರವಾಗಿ ಪ್ರವೇಶಿಸುವುದನ್ನು ನೋಡುತ್ತೇವೆ. ಮೂಲ ಸ್ಥಾಯಿಯಾಗಿ ಇರುವಂತಹ ಮನುಷ್ಯ ಸಂಬಂಧಗಳಲ್ಲಿ ಈ ಸಂಗತಿಗಳು ಬಿರುಕನ್ನುಂಟುಮಾಡಿವೆ. ಅಷ್ಟಾಗಿಯೂ ಇಲ್ಲಿನ ಪಾತ್ರಗಳು ಜೀವನದಲ್ಲಿ ಕೇಡನ್ನು ಸಹಿಸುವ ಧಾರಣಶಕ್ತಿಯನ್ನು ಹೊಂದಿವೆ. ಈ ಧಾರಣಶಕ್ತಿ ಸಮಾಜದಲ್ಲಿ ಇಲ್ಲದ ಮಾನವೀಯತೆಯ ಆರ್ದ್ರತೆಯನ್ನು ಮತ್ತಷ್ಟು ಹೆಚ್ಚಿಸಲು ಪ್ರಯತ್ನಿಸಿವೆ. ಹಾಗೆ ನೋಡಿದರೆ 'ಕನ್ನಡದಲ್ಲಿ ರಜಾಕಾರರ ದಾಳಿಯನ್ನು ಕುರಿತು ಅಷ್ಟು ತೀವ್ರವಾದ ಬರವಣಿಗೆ ಇದುವರೆಗೂ ಬರಲಿಲ್ಲ' ಎಂಬ ಅಮರೇಶ ನುಗಡೋಣಿ ಅವರ ಮಾತು ನಿಜ. ಒಂದು ಸಾಂಸ್ಕೃತಿಕ ಘಟನೆ ಸಮಾಜದ ಮೂಲ ಅಂತಃಸತ್ವವನ್ನು ಕಲಕಿ ಜನ ಬದುಕಿಗೆ ಒಂದು ಪಾಠವಾಗಿ ದಕ್ಕಬೇಕು. ಚರಿತ್ರೆಯ ಘಟನೆಗಳನ್ನು ನಾವು ಪರಿಭಾವಿಸಬೇಕಾಗಿರುವುದು ಈ ನಿಟ್ಟಿನಲ್ಲಿಯೆ. ಆದರೆ ಸಾಮಾಜಿಕ ಸಂಸ್ಥೆಗಳು, ಧಾರ್ಮಿಕ ವ್ಯವಸ್ಥೆಯ ನಿಲುವುಗಳು ಇಂತಹ ಸಂದರ್ಭದಲ್ಲಿ ತಡೆಗೋಡೆಗಳಾಗಿ ನಿಲ್ಲುವುದನ್ನು ನೋಡುತ್ತೇವೆ. ಸಾಮಾಜಿಕ ಮೌಲ್ಯ ವ್ಯವಸ್ಥೆಯನ್ನು ರೂಪಾಂತರಿಕ ಮತ್ತು ಚಲನಶೀಲ ಸ್ವರೂಪದಲ್ಲಿ ನೋಡದೆ ಹೋದಾಗ ಇಂತಹ ಸಂದರ್ಭಗಳು ಸೃಷ್ಟಿಯಾಗುತ್ತವೆ. ಹಿಂದೂ–ಮುಸ್ಲಿಂ ಎಂಬ ಧಾರ್ಮಿಕತೆಯನ್ನು ಮತ್ತಷ್ಟು ಗಟ್ಟಿಗೊಳಿಸಿದ ರಜಾಕಾರರ ದಾಳಿ ಬ್ರಿಟಿಷರ ಒಡೆದು ಆಳುವ ನೀತಿಯ ಪ್ರತಿಫಲವಾಗಿದೆ. ಆದರೆ ಇಲ್ಲಿನ ಕತೆಗಳ ಪಾತ್ರಗಳು ಇದಕ್ಕೆ ವಿರುದ್ಧವಾಗಿ ವರ್ತಿಸುತ್ತ ಬಂದಿರುವುದು ವಿಶೇಷ. 'ಸಂಬಂಧ' ಕಥೆಯಲ್ಲಿ ಮಾಸ್ತರ ಮಹಮ್ಮದನ ಕುಟುಂಬವನ್ನು, ಮಹಮ್ಮದ ಮಾಸ್ತರನ ಕುಟುಂಬವನ್ನು ರಕ್ಷಿಸುತ್ತಾರೆ. 'ನಾಯಿ ಮತ್ತು ಪಿಂಚಣಿ' ಕಥೆಯಲ್ಲಿ ಈರವ್ವ ರಂಗಪ್ಪನ ಜೊತೆ ನಿರಂತರ ಹೋರಾಡುತ್ತಾಳೆ.

"ಈ ಪ್ರದೇಶದ ಪ್ರಜೆಗಳು ನಿಜಾಮ–ರಜಾಕಾರರ ವಿರುದ್ಧ ಹೋರಾಡುವ ಸಂದರ್ಭ ನಿರ್ಮಾಣವಾದದ್ದು ನಿಜ. ಆದರೆ ಹಳ್ಳಿ ಹಳ್ಳಿಗಳಲ್ಲಿ ನಡೆದ ಈ ಹೋರಾಟದ ಸ್ವರೂಪವನ್ನು ನೋಡಿದರೆ, ಸ್ವಾತಂತ್ರ್ಯದ ಹೋರಾಟ, ವಿಮೋಚನೆಯ ಹೋರಾಟ, ದೂರ್ತರಿಗೆ ನೆಪವಾಯಿತು. ಮನುಷ್ಯನ ಕೆಟ್ಟ ಗುಣಗಳು ಪ್ರಕಟವಾದವು. ಅವಕಾಶ ಮನುಷ್ಯನ ಗುಣವನ್ನು ಹೊರಹಾಕಬಲ್ಲದು ಎಂಬುದಕ್ಕೆ ಈ ಸಂದರ್ಭವೇ ನಿದರ್ಶನವಾಗಿದೆ. ಲಂಕೇಶರ 'ದಾಳಿ' ಕಥೆ ಇದನ್ನು ಸಮರ್ಥವಾಗಿ ವ್ಯಕ್ತಪಡಿಸುತ್ತದೆ. ರಜಾಕಾರರು ಹಳ್ಳಿಗೆ ದಾಳಿ ಮಾಡುತ್ತಾರೆ. ನಾಳೆ, ನಾಡದ್ದು ಗೊತ್ತಿಲ್ಲ. ಆದರೆ ರಜಾಕಾರರ ನಿರೀಕ್ಷೆಯಲ್ಲಿಯೇ ಊರು ದಾಳಿಯನ್ನು ಆವಾಹಿಸಿಕೊಳ್ಳುತ್ತದೆ. ಊರ ಜನರ ಮನಸ್ಸು ರಜಾಕಾರರು ಬರುವುದಕ್ಕಿಂತ ಮೊದಲೇ ದಾಳಿ ನಡೆದು ಹೋಗಿದೆಯೋ ಏನೋ ಎಂಬಂತಾಗಿರುತ್ತದೆ. ಈ ರಜಾಕಾರರ ವಿರುದ್ಧವೇ ನಿರಂತರ ಹೋರಾಟ ನಡೆದಿರುತ್ತದೆ. ಹಳ್ಳಿ ಹಳ್ಳಿಗಳ ಜನ ಸಮುದಾಯಗಳ ಒಳಗೇ ನೂರಾರು ಜನ ರಜಾಕಾರರಿರುತ್ತಾರೆ. ಈ ರಜಾಕಾರರ ವಿರುದ್ಧವೇ ನಿರಂತರ ಹೋರಾಟ ನಡೆದಿರುತ್ತದೆ. ಸಾವು ನೋವು

ಅನುಭವಿಸುವವರು ಮಾತ್ರ ದುರ್ಬಲರು ಅಮಾಯಕರು" ಅಮರೇಶ ನುಗಡೋಣಿ (ಕಥಾ ಸಾಹಿತ್ಯ ಸಾಮಾಜಿಕ ವಾಸ್ತವ ಪು.೫೬). ಹೈದರಾಬಾದ್ ಕರ್ನಾಟಕದ ಸಾಮಾಜಿಕ ಸ್ವರೂಪನ್ನು ಅತ್ಯಂತ ಆಳವಾಗಿ ಸಂಕಟಕ್ಕೆ ಒಳಗಾಗುವ ಹಾಗೆ ಮಾಡಿದ್ದು ಫ್ಯೂಡಲ್ ವ್ಯವಸ್ಥೆ. ಸ್ವತಂತ್ರ ಪೂರ್ವ ಮತ್ತು ಸ್ವಾತಂತ್ರ್ಯಾ ನಂತರದ ಸಂದರ್ಭಗಳಲ್ಲಿ ಇದು ಆಳವಾಗಿ ಬೇರೂರಿದೆ. ಈ ಊಳಿಗಮಾನ್ಯ ವ್ಯವಸ್ಥೆ ಸ್ಥಳೀಯ ಧಾರ್ಮಿಕ ಸಂಸ್ಥೆಗಳ ಬೆಂಬಲದೊಂದಿಗೆ ಹಳ್ಳಿಗಳಲ್ಲಿ ಅಧಿಕಾರಶಾಹಿ ಸ್ವರೂಪದಲ್ಲಿ ರೂಪ ಪಡೆದಿದೆ. ಜಾತಿ ವ್ಯವಸ್ಥೆಯಲ್ಲಿ ಮೇಲ್ವರ್ಗದ ಜನರ ಕೈಯಲ್ಲಿದ್ದ ಈ ಅಧಿಕಾರ ಮತ್ತು ಜಮೀನ್ದಾರಿಕೆ ನಿರಂತರ ತಳ ಸಮುದಾಯಗಳನ್ನು ದಾರಿದ್ರ್ಯದ ಕೂಪಕ್ಕೆ ತಳ್ಳಿವೆ. ಇದರಿಂದ ಹೊರಬರುವ ದಾರಿಗಳನ್ನು ಇಲ್ಲಿನ ಕತೆಗಾರರು ಕಂಡುಕೊಳ್ಳುವುದನ್ನು ನಡೆಸುತ್ತಲೇ ಇದ್ದಾರೆ. ಇದಕ್ಕೆ ಚಂದ್ರಕಾಂತ ಕುಸನೂರು ಅವರ 'ಒಂದು ಊರಿನ ಕಥೆ', ಚೆನ್ನಣ್ಣ ವಾಲಿಕಾರ್ ಅವರ 'ಹೊಲಗೇರಿ' ಮತ್ತು 'ಅಡಿ ಜಾತಿ', ಗೀತಾ ನಾಗಭೂಷಣ ಅವರ 'ಗರ್ಭ' ಮತ್ತು 'ಬೆಳಕಿನೆಡೆಗೆ', ಶಾಂತರಸರ 'ಗೋದಾನ' ಮತ್ತು 'ಮಲೀನ ಮಜ್ಜನ ನ್ಯಾಯಕ್ಕೆಳಿಸಿ', ಬಿ.ಟಿ. ಲಲಿತನಾಯಕ ಅವರ 'ಹಬ್ಬ ಮತ್ತು ಬಲಿ', ರಾಜಶೇಖರ ನೀರಮಾನ್ವಿ ಅವರ 'ಪ್ರಜಾಪ್ರಭುತ್ವದಲ್ಲೊಂದು ಸಾವು' ಮತ್ತು 'ಬೆತ್ತಲೆ ಸ್ವಾಮಿ' ಅಮರೇಶ ನುಗಡೋಣಿ ಅವರ 'ತಮಂಧದ ಕೇಡು', 'ಧರೆ ಉರಿದರೆ', 'ನೀರು ತಂದವರು' ಮತ್ತು 'ಉತ್ತಮಣ' ಮುಂತಾದ ಕಥೆಗಳ ವಸ್ತುಗಳೇ ಸಾಕ್ಷಿ.

'ಒಂದು ಊರಿನ ಕಥೆ'ಯಲ್ಲಿ ಬರುವ ಚೆನ್ನಪ್ಪ ಗೌಡ ಜಮೀನ್ದಾರ. ಎರಡು ಸಾವಿರ ಎಕರೆ ಭೂಮಿಯ ಒಡೆಯ. ಸ್ವಾತಂತ್ರ ಹೋರಾಟದಲ್ಲಿ ತಟಸ್ಥ ನೀತಿಯನ್ನು ಅನುಸರಿಸಿ ಬ್ರಿಟಿಷರೊಂದಿಗೆ ಒಳ್ಳೆಯ ಸಂಬಂಧ ಹೊಂದಿದ್ದವ. ಈ ಗೆಳೆತನ ತನ್ನ ಭೂಮಿಯನ್ನು ಉಳುವವರು, ದುಡಿಯುವವರು ಸ್ವತಂತ್ರ ಹೋರಾಟದಲ್ಲಿ ಪಾಲ್ಗೊಳ್ಳದಂತೆ ನೋಡಿಕೊಂಡಿರಲು ಕಾರಣವಾಗಿತ್ತು. ಆದರೆ, ಸ್ವಾತಂತ್ರ್ಯಾ ನಂತರ ಹೋರಾಟಗಾರರನ್ನು ಬದಿಗೊತ್ತಿ ಗುಪ್ತವಾಗಿ ತನ್ನದು ಮಹಾ ಹೋರಾಟ ಎಂಬ ಸುಳ್ಳು ಸೃಷ್ಟಿಸಿ, ತನ್ನ ಚೇಲಾಗಳಿಂದ ಪ್ರಚಾರ ಮಾಡಿಸಿ ನಂಬಿಕೆಯನ್ನು ಗಳಿಸಿಕೊಂಡು ಮುನ್ನೆಲೆಗೆ ಬಂದ. ಚೆನ್ನಪ್ಪ ಗೌಡನ ಹೆಂಡತಿ ಸಾವಿತ್ರಿ ಚುನಾವಣೆಯಲ್ಲಿ ಗೆದ್ದು ಎಂ.ಪಿ. ಆದಳು. ಸ್ವತಂತ್ರ ಬಂದರೂ ಗೌಡನ ಸ್ಥಾನಮಾನದಲ್ಲಿ ಮೊದಲಿದ್ದಂತೆ ಯಾವುದೇ ಬದಲಾವಣೆಗಳಾಗಲಿಲ್ಲ. ಎರಡು ಸಾವಿರ ಎಕರೆ ಭೂಮಿಯಲ್ಲಿ ನಿಷ್ಠೆಯಿಂದ ಕೆಲಸ ಮಾಡುತ್ತಿದ್ದ ನೂರಾರು ರೈತರು ತಪ್ಪದೆ ತಾವು ಬೆಳೆದ ಬೆಳೆಯನ್ನು ತಂದುಕೊಡುತ್ತಿದ್ದರು. ಟೆನೆನ್ಸಿ ಕಾಯ್ದೆ ಜಾರಿಗೆ ಬಂದ ಸುದ್ದಿ ಕೇಳಿ ರೈತರೆಲ್ಲ ತಾವು ಉಳುಮೆ ಮಾಡುವ ಭೂಮಿ ತಮಗೆ ದಕ್ಕಬಹುದು ಎಂದು ಪ್ರಯತ್ನಿಸಿ ಗೌಡನಿಂದ ಸಾವು ನೋವು ಅನುಭವಿಸಿದರು. ಶಾಂತಪ್ಪ ಎಂಬ ರೈತ ಮುಖಂಡ ಗೌಡರ ಬಂದೂಕಿಗೆ ಬಲಿಯಾದ. ಸರ್ಕಾರದ ಮಂತ್ರಿಗಳು ಜಿಲ್ಲೆಯ ಎಂ.ಪಿ. ಸಾವಿತ್ರಿ ಯೊಂದಿಗೆ ಗುಪ್ತ ಸಂಬಂಧದಲ್ಲಿದ್ದರು. ಜಮೀನ್ದಾರರನ್ನು ಪ್ರಶ್ನಿಸುವವರು ಯಾರೂ ಇಲ್ಲದಂತಾಯಿತು. ಸಾಮಾನ್ಯರು ಅಕ್ಷರ ಕಲಿಯದಂತೆ ಆಳುವವರು ಶಾಲೆಯನ್ನು ಊರೊಳಗೆ ಬರದಂತೆ ನೋಡಿಕೊಂಡರು. ಈ ವ್ಯಂಗ್ಯವನ್ನು ಕುಸನೂರು ಅವರು ಸ್ವಾತಂತ್ರ್ಯಾ ನಂತರದ ರಾಜಕೀಯ ಸಂದರ್ಭಗಳಲ್ಲಿ ರೂಪಿಸಿದ್ದಾರೆ. ಕಾನೂನು ವ್ಯವಸ್ಥೆ ರಾಜಕಾರಣಿಗಳ ಪರವಾಗಿ ಇದ್ದಾಗಲೂ ಜನಸಾಮಾನ್ಯರ ಪ್ರತಿಕ್ರಿಯೆಗಳನ್ನು ಜಮೀನ್ದಾರಿ ವ್ಯವಸ್ಥೆ ಹೇಗೆ ಕಸಿದುಕೊಂಡಿದೆ

ಎಂಬುದು ಇಲ್ಲಿದೆ. ಚುನಾವಣೆಗಳ ಕಾಲದ ರಾಜಕೀಯ ಮತ್ತು ಸಾಮಾಜಿಕ ಬದುಕಿನ ಬಿಕ್ಕಟ್ಟುಗಳನ್ನು, ತಲ್ಲಣಗಳನ್ನು ಈ ಕತೆ ನಗ್ನವಾಗಿ ಹೇಳುತ್ತದೆ.

ಚೆನ್ನಣ್ಣ ವಾಲೀಕಾರ್ ಅವರ 'ಹೊಲಗೇರಿ' ಕತೆ 'ಗೌಡರ ತಿಪ್ಪೆಯಲ್ಲಿ ಕುಳಿತು ಉಚ್ಚೆ ಹೊಯ್ದ' ಎಂಬ ನೆಪವನ್ನು ಮುಂದೆ ಮಾಡಿ ಶಿವರಾಯ ಮಾಸ್ತರನನ್ನು ಗೌಡನ ಜೀತದಾಳುಗಳು ಹೊಡೆದುಕೊಲ್ಲುವ ದಾರುಣ ಸ್ಥಿತಿಯನ್ನು ಚಿತ್ರಿಸುತ್ತದೆ. ಶಿವರಾಯ ಮಾಸ್ತರ ತನ್ನ ಊರಲ್ಲಿ ಕೆಳವರ್ಗದ ಮಾದಿಗರು ಮತ್ತು ಹೊಲೆಯರು ಶಿಕ್ಷಣ ಪಡೆಯಲಿ ಎಂದು ಶ್ರಮಿಸಿದ. ಆದರೆ ಗೌಡ ಅವರನ್ನು ಕೊಲ್ಲಲು ಇದೇ ಕೆಳವರ್ಗದ ಜನರನ್ನು ಬಳಸಿಕೊಂಡ. ಊರಲ್ಲಿ ಬಂಡೆಪ್ಪ ಸಾಹುಕಾರ, ಮಾಲಿಗೌಡರ ಬಸಪ್ಪ ಮತ್ತು ಕುಲಕರ್ಣಿ ಭೀಮಪ್ಪ ಇವರು ಆರ್ಥಿಕವಾಗಿ ಬಲವುಳ್ಳವರು. ಕೆಳವರ್ಗದವರೆಲ್ಲ ಇವರ ಅಧೀನದಲ್ಲಿ ಇದ್ದು ದುಡಿದು ತಿನ್ನುವವರು. ಕಥೆಯಲ್ಲಿ ಕೆಳವರ್ಗದವರ ಮೇಲಿನ ಕ್ರೌರ್ಯ, ಅವರ ಅಸಹಾಯಕತೆ, ಸಾವು, ನೋವಿನ ಅನೇಕ ಪ್ರಸಂಗಗಳು ಬರುತ್ತವೆ. ಇದಷ್ಟೇ ಅಲ್ಲದೆ ಕೆಳವರ್ಗದ ಗಂಡಸರನ್ನು ಜೀತದಾಳನ್ನಾಗಿಸಿ ಮೇಲ್ವರ್ಗದವರು ಅವರ ಹೆಂಗಸರನ್ನು ಲೈಂಗಿಕವಾಗಿ ಶೋಷಣೆ ಮಾಡುವ ಚಿತ್ರಣ ಇಲ್ಲಿದೆ. ಬಂಡಾಯ ಚಳುವಳಿಯ ಆಶಯಗಳಿಂದ ಬರೆಯುತ್ತಿದ್ದ ಚೆನ್ನಣ್ಣ ವಾಲಿಕಾರ ಸಮಾಜದಲ್ಲಿನ ಶೋಷಣೆಯ ಅನೇಕ ಮುಖಗಳನ್ನು ತೆರೆದಿಡುತ್ತಾರೆ.

ಶಾಂತರಸರ 'ಗೋದಾನ' ಕತೆ ಪುರೋಹಿತಶಾಹಿಯ ಅನ್ಯಾಯವನ್ನು ವಿವರಿಸುತ್ತದೆ. ಕೆಳವರ್ಗದ ಕರಿಯನ ಮಗ ರೋಗದಿಂದ ಸಾಯುತ್ತಾನೆ. ಮಗ ಸತ್ತ ಗಳಿಗೆ ಸರಿ ಇಲ್ಲ, ಹಾಗಾಗಿ ಶಾಂತಿ ಮಾಡಿಸಬೇಕು ಎಂಬ ನೆಪದಲ್ಲಿ ಆತನ ಹಾಲು ಕೊಡುವ ಆಕಳು ಮತ್ತು ಅದರ ಕರುವನ್ನು ಬ್ರಾಹ್ಮಣರಿಗೆ ದಾನ ಮಾಡಬೇಕು ಎಂಬ ನಂಬಿಕೆಯೇ ಈ ಗೋದಾನ. ತನ್ನ ಕಣ್ಣೆದುರೇ ಕರಿಯ ಶೋಷಣೆಗೆ ಗುರಿಯಾಗುವುದನ್ನು ಅವನ ಕುಟುಂಬ ನೋಡುತ್ತಾ ನಿಲ್ಲುತ್ತದೆ. ಅವನನ್ನು ನಂಬಿಸುವ ಪುರೋಹಿತಶಾಹಿಗಳ ಕ್ರೌರ್ಯ ಊಳಿಗಮಾನ್ಯ ವ್ಯವಸ್ಥೆಯ ಕ್ರೌರ್ಯವನ್ನೂ ಮೀರಿಸುವಂತಿದೆ. ಹೀಗೆ ಶತಮಾನಗಳಿಂದಲೂ ಪುರೋಹಿತಶಾಹಿ ವ್ಯವಸ್ಥೆ ಧಾರ್ಮಿಕ ನಂಬಿಕೆಗಳನ್ನು ಕೆಳವರ್ಗದವರ ಮೇಲೆ ಹೇರುತ್ತಾ ಬಂದಿರುವುದನ್ನು ಕತೆ ಚಿತ್ರಿಸಿ ಚರಿತ್ರೆಯ ನೆನಪುಗಳಿಗೆ ವಿಸ್ತಾರಗೊಳ್ಳುತ್ತದೆ.

ಗೀತಾ ನಾಗಭೂಷಣ ಅವರ 'ಗರ್ಭ' ಮತ್ತು 'ಬೆಳಕಿನೆಡೆಗೆ' ಕಥೆಗಳು ಜಮೀನ್ದಾರಿ ವ್ಯವಸ್ಥೆಯಿಂದ ಕೆಳವರ್ಗದ ಮಹಿಳೆಯರಿಗೆ ಆದ ಅನ್ಯಾಯಗಳನ್ನು ಚಿತ್ರಿಸುತ್ತವೆ. 'ಗರ್ಭ' ಕತೆಯಲ್ಲಿ ಗೌರವ್ವ ಎಂಬ ಗೌಡತಿಗೆ ಮಕ್ಕಳಾಗುವುದಿಲ್ಲ. ತಾನೇ ನಿಂತು ಚಿಕ್ಕಿ ಎಂಬ ಮುಗ್ಧ ಹುಡುಗಿಯನ್ನು ಗೌಡನ ಬಳಿ ಮಲಗುವಂತೆ ಮಾಡಿ ಅದರಿಂದ ಹುಟ್ಟಿದ ಕೂಸನ್ನು ತನ್ನದೆಂದು ಹೇಳಿಕೊಂಡು ಓಡಾಡುತ್ತಾಳೆ. ಇತ್ತ ಮುಗ್ಧ ಹುಡುಗಿ ಚಿಕ್ಕಿ ಅನೈತಿಕವಾಗಿ ಗೌಡನಲ್ಲಿ ಮಲಗಿ ಅವರ ಕ್ರೌರ್ಯಕ್ಕೆ ಬಲಿಯಾಗುತ್ತಾಳೆ. 'ಬೆಳಕಿನೆಡೆಗೆ' ಕತೆಯ ಗೌಡನ ಮಗ ಈರಣ್ಣ ಕೆಡಿಸಿದ ಭವಾನಿ ಮದುವೆಯಾಗಿ ಗೌರವದ ಬಾಳು ನಡೆಸಲು ಆಗದೆ 'ಸೂಳೆ' ಆಗುತ್ತಾಳೆ. ಆಕೆಯ ಮಗಳು ಗೌರಿಯ ಕಥೆಯೂ ಇದೇ ರೀತಿ ಆಗುತ್ತದೆ ಎಂದಾಗ ಅದರಿಂದ ತಪ್ಪಿಸಿಕೊಳ್ಳಲು ಪ್ರಯತ್ನ ಪಡುವ ದುರಂತದ ಕತೆ ಇದಾಗಿದೆ. ಈ ಕತೆಗಾರ್ತಿ ಮಧ್ಯಮವರ್ಗದ ಹೆಣ್ಣಿನ

ಅನುಭವ ಜಗತ್ತನ್ನು ಸ್ತ್ರೀವಾದಿ ಹಠಗಳಿಂದ ಶೋಧಿಸುತ್ತಾರೆ. ಇಲ್ಲಿನ ಬದುಕು ದುರ್ಬಲವಾಗದೆ ಬದಲಾವಣೆಯ ಕಾಳಜಿಯಿಂದ ಮುನ್ನಡೆಯುತ್ತದೆ.

ಹೈದರಾಬಾದ್ ಕರ್ನಾಟಕ ಭಾಗದ ಕತೆಗಳಲ್ಲಿ ಹೆಣ್ಣು ವಿಭಿನ್ನ ನೆಲೆಗಳಲ್ಲಿ ಚಿತ್ರಣಗೊಂಡಿದ್ದಾಳೆ. ಶಾಂತರಸರ ಕತೆಗಳ ಬಗೆಗೆ ಬರೆಯುತ್ತ ಓ.ಎಲ್.ಎನ್. “ಹೆಣ್ಣು ಮತ್ತು ಕಾಮನೆ ಇವರ ಎಲ್ಲ ಕಥೆಗಳ ಕೇಂದ್ರವಾಗಿದೆ ಎಂದು ತೋರುತ್ತದೆ. ಕಾಯಿಸುವ ಹೆಣ್ಣು, ಕಾಮದ ವಸ್ತುವಾಗುವ ಹೆಣ್ಣು, ಕಾಮನೆಗಳನ್ನು ಪೂರೈಸಿಕೊಳ್ಳಲು ಚಾತುರ್ಯ ತೋರುವ ಹೆಣ್ಣು, ಆದರ್ಶವನ್ನು ಪ್ರೇರಿಸುವ ಹೆಣ್ಣು, ಬದುಕಿ ಉಳಿದ ಫಲವನ್ನು ತೋರುವ ಹೆಣ್ಣು ಭಾನುಮತಿ ಕರ್ಣರಿಂದ ಹಿಡಿದು ಡಾಕ್ಟರನ್ನು ಪರವಶಗೊಳಿಸುವ ಆಧುನಿಕ ಹೆಣ್ಣಿನವರೆಗೆ ಅಪಾರ ವೈವಿಧ್ಯ ಈ ಹೆಣ್ಣುಗಳಲ್ಲಿದೆ” (ಬಿಸಿಲ ಹನಿಗಳು ಪು.೧೧೦).

ರಾಜಶೇಖರ ನೀರಮಾನ್ವಿ ಎರಡೇ ಕಥಾಸಂಕಲನಗಳನ್ನು ತಂದರೂ ಕಥನ ಪರಂಪರೆಯಲ್ಲಿ ಗಟ್ಟಿಯಾಗಿ ನಿಲ್ಲಬಲ್ಲ ಪ್ರತಿಭೆ. ಮೊದಮೊದಲು ನವ್ಯದ ತಾತ್ವಿಕತೆಯಲ್ಲಿ ಕತೆಗಳನ್ನು ಬರೆಯುತ್ತಿದ್ದರು. ಅದಕ್ಕೆ ಅತ್ಯುತ್ತಮ ಉದಾಹರಣೆ ಅವರ ‘ಹಂಗಿನರಮನೆಯ ಹೊರಗೆ’. ಸಾಮಾಜಿಕ ವ್ಯವಸ್ಥೆಯ ಭಾಗವಾದ ‘ಕುಟುಂಬ’ ಹೇಗೆ ಅವ್ಯವಸ್ಥೆಯ ಕೂಪವಾಗಿದೆ ಎಂದು ಇದು ಚಿತ್ರಿಸುತ್ತದೆ. ಇಲ್ಲಿನ ಪಾತ್ರಗಳು ಪ್ರತಿಯೊಂದು ದ್ವೀಪದಂತಿದ್ದು ಸಂಬಂಧಗಳಲ್ಲಿನ ಜಟಿಲತೆ, ಅದರ ಕ್ಷಣಿಕತೆಯಲ್ಲಿ ಆರ್ದ್ರವಾದ ಕಕ್ಕುಲಾತಿಗೆ, ಒಲವಿಗೆ, ಮಾನವೀಯ ಆವರಣಕ್ಕಾಗಿ ಹಂಬಲಿಸುತ್ತವೆ. ನೀರಮಾನ್ವಿ ಅವರು ಎರಡನೆ ಸಂಕಲನ ಬರೆಯುವ ಹೊತ್ತಿಗೆ ಸಾಮಾಜಿಕ ಅಂಶಗಳಿಗೆ ವಿಸ್ತರಿಸಿಕೊಂಡರು. ಅವರ ‘ಬೆತ್ತಲೆ ಸ್ವಾಮಿ’ ಮತ್ತು ‘ಪ್ರಜಾಪ್ರಭುತ್ವದಲ್ಲಿ ಒಂದು ಸಾವು’ ಕತೆಗಳು ಬದಲಾದ ಸಾಮಾಜಿಕ ರಾಜಕೀಯ ಸನ್ನಿವೇಶಗಳನ್ನು ವ್ಯಾಖ್ಯಾನಿಸುತ್ತವೆ. “ರಾಜಕೀಯ ಬೆಳವಣಿಗೆಗಳು ವ್ಯವಸ್ಥೆಯ ಕ್ರೂರತೆಗಳು ಬದುಕನ್ನು ಹೀನಾಯಗೊಳಿಸುತ್ತಿರುವ ಕ್ರಮವನ್ನು ಕುರಿತು ತೀವ್ರ ಆತಂಕದಲ್ಲಿ ನೀರಮಾನ್ವಿ ಬರೆಯುತ್ತಾರೆ. ಹಾಗೆ ಬರೆಯುವಾಗ ಅವರ ಚಿತ್ರಣ ಉದ್ವೇಗ ಮತ್ತು ವ್ಯಂಗಗಳ ನಡುವೆ ಎಲ್ಲಿಯೋ ಒಂದು ಕಡೆ ನಿಲ್ಲುತ್ತದೆ. ಅಲ್ಲಿಯೇ ಸಾಗುತ್ತದೆ. ‘ಬೆತ್ತಲೆ ಸ್ವಾಮಿ’ ಕಥೆಯಲ್ಲಿ ಭ್ರಷ್ಟತೆಯನ್ನು ಅದರ ವಿಕಾಸಗಳನ್ನು ಮಂಡಿಸುವ ಕ್ರಮದಲ್ಲಿ ಬೆತ್ತಲೆ ಸ್ವಾಮಿಯ ಪಾತ್ರದ ಸಾಧ್ಯತೆಗಳನ್ನು ಮರೆಯುತ್ತಾರೆ. ಸನ್ನಿವೇಶದ ಹತಾಶೆಯನ್ನು ಕತೆ ಮುಂದಿಟ್ಟರು ಕಲೆಯ ಅವಕಾಶಗಳಿಂದ ವಂಚಿತವಾಗುತ್ತದೆ” (ಬಿಸಿಲ ಹನಿಗಳು ಪು.೧೨೪–೧೨೫) ಎಂದು ಕೆ.ವಿ. ನಾರಾಯಣ ಅವರು ಹೇಳುತ್ತಾರೆ.

ಅಮರೇಶ ನುಗಡೋಣಿ ಇಡೀ ಕನ್ನಡ ಕಥಾಸಾಹಿತ್ಯಕ್ಕೆ ಹೊಸ ದಾರಿಗಳನ್ನು ನಿರ್ಮಿಸಿದಂತಹ ಕತೆಗಾರ. ಹೈದರಾಬಾದ್ ಕರ್ನಾಟಕದ ಸಾಮಾಜಿಕ ಮತ್ತು ಸಾಂಸ್ಕೃತಿಕ ಘಟನೆಗಳ ಆಳವಾದ ತೀಳುವಳಿಕೆಯಲ್ಲಿ ಮತ್ತು ಸಾಮಾಜಿಕ ಸ್ಥಿತ್ಯಂತರಗಳನ್ನು, ರಾಜಕೀಯ ಬೆಳವಣಿಗೆಗಳನ್ನು ತೀವ್ರವಾಗಿ ಸ್ಪರ್ಶಿಸಿ ಇವರು ಬರೆಯುತ್ತ ಬಂದಿದ್ದಾರೆ. ಕಲ್ಯಾಣ ಕ್ರಾಂತಿಯ ಮೂಲ ಆಶಯಗಳು ಕೈಗೂಡಲಿಲ್ಲ ಎಂಬ ವಿಷಾಧ ಇವರನ್ನು ತೀವ್ರವಾಗಿ ಕಾಡಿದಂತಿದೆ. ‘ತಮಂಧದ ಕೇಡು’ ಕತೆಯ ‘ಶಾಂತಗೌಡ ದುರುಗನ ಹೆಗಲ ಮೇಲೆ ಕುಳಿತು ನದಿ ದಾಟುವ’ ರೂಪಕ ಬೆರಗಾಗಿಸುವಂತದು. ದುರುಗ ಮಗ ಚೆನ್ನನಿಗೆ ‘ಇದೇನು ಬಸವಣ್ಣಪ್ಪನ ಕಾಲ ಏನಲೇ! ಚಪ್ಲಿ ಹೊಲಿವ ಕಯಿಗೆ ಲಿಂಗ ಬರದ್ಕಾ’ ಎಂದು ಹೇಳುವ ಮಾತು ಇಡೀ

ತಳಸಮುದಾಯದ ಪ್ರತಿರೋಧವಾಗಿ ನಿಲ್ಲುತ್ತದೆ. 'ಧರೆ ಉರಿದರೆ'ಯಲ್ಲಿನ ಪರಕ್ಕನ ಸಾವು, ಅದರ ಸುತ್ತ ಹೆಣೆದುಕೊಳ್ಳುವ ರಾಜಕೀಯ, 'ನೀರು ತಂದವರು' ಕತೆಯಲ್ಲಿನ ತಳಸಮುದಾಯದವರ ನೋವು ಅಮರೇಶ ನುಗಡೋಣಿ ಅವರ ಕಲೆಗಾರಿಕೆಯ ಶ್ರೇಷ್ಠ ಮಾದರಿಗಳು. "ಅಮರೇಶ ನುಗಡೋಣಿಯವರು ಹೊಸ ತಲೆಮಾರಿನ ಬರಹಗಾರರಿಗೆ ಕಥನದ ಒಂದು ಮಾದರಿಯನ್ನು ಕಲಿಸುವಷ್ಟು ಬೆಳೆದಿದ್ದಾರೆ. ಜೊತೆಗೆ ತಮ್ಮ ಕಥನದ ಬಗೆಯನ್ನು ಬದಲಾದ ಅಗತ್ಯಗಳಿಗೆ ಬೇಕಾದಂತೆ ಮರು ರೂಪಿಸಿಕೊಳ್ಳುವ ಹೊಣೆಯನ್ನು ನಿಭಾಯಿಸುತ್ತಿದ್ದಾರೆ..... ಅವರು ಈವರೆಗೆ ಸಾಗಿ ಬಂದ ಹಾದಿಯನ್ನು ಅವರೆ ಖುದ್ದಾಗಿ ರೂಪಿಸಿಕೊಂಡಿದ್ದಾರೆ. ಕತೆಯ ಭಿತ್ತಿ ಸಾಮಾಜಿಕವಾಗಿದ್ದೂ ಸಾಮಾಜಿಕತೆಯನ್ನೇ ಮುಖ್ಯ ಆಸಕ್ತಿಯನ್ನಾಗಿ ಮಾಡಿಕೊಳ್ಳಬೇಕೆಂಬ ಒತ್ತಾಯದಿಂದ ಅವರು ಹೊರಬಂದದ್ದು ಒಂದು ಮುಖ್ಯ ಸಾಧನೆ. ಈಗಲೂ ಅವರ ಕಥನದ ಕೇಂದ್ರದಲ್ಲಿ ಮನುಷ್ಯರಿದ್ದಾರೆ. ಆ ಮನುಷ್ಯರಿಗೆ ಸಾಮಾಜಿಕ ಚಹರೆಗಳಿವೆ. ಆದರೆ ಅವರ ಮೂಲಕ ಅಮರೇಶ ಹುಡುಕುತ್ತಿರುವುದು ಆ ಜನರ ಸಾಮಾಜಿಕ ವ್ಯಕ್ತಿತ್ವವನ್ನಲ್ಲ; ಬದಲಿಗೆ ಮನುಷ್ಯತ್ವದ ತಿರುಳನ್ನು" (ತಮಂಧದ ಕೇಡು ಬೆನ್ನುಡಿ) ಎನ್ನುವ ಕೆ.ವಿ. ನಾರಾಯಣ ಅವರು ನುಗಡೋಣಿಯವರ ಕತೆಗಳ ಹೊರಳುವಿಕೆಯನ್ನು ಗುರುತಿಸುತ್ತಾರೆ.

ಬಿಸಿಲು ನಾಡಿನ ಸಣ್ಣ ಕತೆಗಳಲ್ಲಿ ಆಯಾ ಕಾಲಘಟ್ಟದಲ್ಲಿ ಭಿನ್ನ ಭಿನ್ನ ಗ್ರಹಿಕೆ, ನಂಬಿಕೆ, ಅಭಿವ್ಯಕ್ತಿ ಕ್ರಮಗಳು ಪರಸ್ಪರ ಘರ್ಷಿಸುತ್ತಾ ಇನ್ನೊಂದರೊಡನೆ ಒಡನಾಡಿ, ಅದರಿಂದ ವಿಶಿಷ್ಟವಾಗಿ ಪ್ರತ್ಯೇಕವಾಗುವ ಪ್ರಯತ್ನವಿದೆ. ಇಲ್ಲಿನ ಕಥೆಗಳು ಬೇರೆ ಬೇರೆ ಚಳುವಳಿಗಳ ಸಂದರ್ಭಗಳಲ್ಲಿ ಕನ್ನಡದಲ್ಲಿ ರೂಪಗೊಂಡ ಸಣ್ಣ ಕಥೆಗಳೊಂದಿಗೆ ಮುಖಾಮುಖಿಯಾಗಿವೆ. ಪ್ರಾದೇಶಿಕತೆ ನೆಲೆಯಲ್ಲಿ ಅವುಗಳ ಭಾಷೆ, ನಿರೂಪಣ ತಂತ್ರಗಳು ಮತ್ತು ಆಶಯಗಳು ನಿರ್ಮಾಣಗೊಂಡಿವೆ. ಬಿಸಿಲು ನಾಡಿನ ಸಾಮಾಜಿಕ ಪರಿಸರ ಚಲನಶೀಲ ಆವರಣವನ್ನು ತನ್ನಲ್ಲೇ ಗರ್ಭೀಕರಿಸಿಕೊಂಡಿದೆ. ಗ್ರಾಮ ಭಾರತದ ಸಾಮಾಜಿಕ ಚಹರೆಗಳು ಜಾತಿ ವ್ಯವಸ್ಥೆ, ಊಳಿಗಮಾನ್ಯ ವ್ಯವಸ್ಥೆ – ಇವುಗಳಿಂದ ರೂಪಗೊಂಡಿರುವ ಅಧಿಕಾರ ಕೇಂದ್ರ, ಇದನ್ನು ತನ್ನ ಅಂಕುಶದಲ್ಲಿ ನಿರ್ಧರಿಸುತ್ತಿರುವ ಧಾರ್ಮಿಕ ವ್ಯವಸ್ಥೆ – ಇವುಗಳನ್ನು ನಿರಂತರ ಸಹಿಸುತ್ತಾ ಮತ್ತು ಪ್ರತಿರೋಧಿಸುತ್ತಾ ಬಂದಿರುವ ಸಾಮಾನ್ಯ ಜನಸಮುದಾಯ ಹೀಗೆ ಸಂಕೀರ್ಣವಾದ ಸಾಮಾಜಿಕ ಸ್ವರೂಪವನ್ನು ಬಿಸಿಲು ನಾಡು ಒಳಗೊಂಡಿದೆ. ಸ್ವಾತಂತ್ರ್ಯ ಎಂದು ಕರೆಯುವ ಅಧಿಕಾರ ಹಸ್ತಾಂತರದ ಕಾಲದಿಂದ ಪ್ರಜಾಪ್ರಭುತ್ವ ಮೌಲ್ಯಗಳಿಗೆ ತೆರೆದುಕೊಳ್ಳಲು ಇಂದಿನವರೆಗೂ ಇದು ಪ್ರಯತ್ನಿಸುತ್ತಲೇ ಇದೆ. ಏಕೆಂದರೆ ಪ್ರಜಾತಂತ್ರ ಸಫಲವಾಗಬೇಕೆಂದರೆ ಅದನ್ನು ಸಾಮಾಜಿಕ ಹಾಗೂ ಸಮುದಾಯಿಕ ನಿತ್ಯದ ಜೀವನ ಕ್ರಮಗಳಲ್ಲಿ ರೂಡಿಸಿಕೊಳ್ಳಬೇಕು. ಇಂದು ಪ್ರಜಾಪ್ರಭುತ್ವ ರಾಜಕೀಯವಾಗಿ ವಿಫಲವಾಗಿದೆ. ಸಾಮಾಜಿಕ ಮತ್ತು ಸಾಂಸ್ಕೃತಿಕ ತಾರತಮ್ಯ ಅಧಿಕಾರ ಮತ್ತು ಅಧೀನತೆಯ ನೆಲೆಯಲ್ಲಿ ಮುಂದುವರೆದಿದೆ, ಅಧಿಕಾರ ಭ್ರಷ್ಟರು, ಅಪ್ರಾಮಾಣಿಕರು, ಅದಕ್ಷ ಆಡಳಿತದ ಜತೆಗೆ ಧರ್ಮವೂ ಶಾಮೀಲಾಗಿ ಯಾವುದನ್ನು ವ್ಯವಸ್ಥೆ ಎಂದು ಭಾವಿಸಿದ್ದೇವೋ ಅವೆಲ್ಲವೂ ಈಗ ಅವ್ಯವಸ್ಥೆಯ ಕೂಪವಾಗಿವೆ. ಸುಧಾರಣೆ ತರಲೇಬೇಕಾದ ಸಂದಿಗ್ಧದಲ್ಲಿ ನಾವೆಲ್ಲರೂ ಇದ್ದೇವೆ. ಪ್ರಜಾಪ್ರಭುತ್ವ ಮೌಲ್ಯಗಳನ್ನು ಜನಜೀವನ ಒಂದು ವ್ರತದಂತೆ ಪ್ರಯೋಗಿಸಬೇಕು. ಹಾಗಾಗದಿದ್ದರೆ ನಾವು ಇವತ್ತಿನ ಸಾಮಾಜಿಕ ಪರಿಸ್ಥಿತಿಯನ್ನು ಮುಂದೆಯೂ ಯಥಾ ಸ್ಥಿತಿಯಲ್ಲಿ

ಅನುಭವಿಸಬೇಕಾಗುತ್ತದೆ. ಇಂತಹ ಸೂಕ್ಷ್ಮ ಸಂಗತಿಗಳಿಗೆ ಇಲ್ಲಿನ ಕತೆಗಳು ಪ್ರತಿಕ್ರಿಯಿಸುತ್ತವೆ. ಈ ನೆಲದ ಸಾಮಾಜಿಕ ಬದುಕಿಗೆ ಈ ಕತೆಗಳು ಹೊಸ ವ್ಯಾಖ್ಯಾನಗಳನ್ನು ನೀಡಿವೆ.

ಪರಾಮರ್ಶನ ಗ್ರಂಥಗಳು

- ಅಮರೇಶ ನುಗಡೋಣಿ. (ಸಂ.) (೧೯೯೫). *ಬಿಸಿಲ ಹನಿಗಳು.* ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತು.
- ಅಮರೇಶ ನುಗಡೋಣಿ. (೨೦೧೬). *ತಮಂಧದ ಕೇಡು.* ಪಲ್ಲವ ಪ್ರಕಾಶನ.
- ಅಮರೇಶ ನುಗಡೋಣಿ. *ಕಥಾ ಸಾಹಿತ್ಯ ಸಾಮಾಜಿಕ ವಾಸ್ತವ.* ವಿಜಯಕಲ್ಯಾಣ ಪ್ರಕಾಶನ.
- ಗೀತಾ ನಾಗಭೂಷಣ. (೧೯೯೩). *ಅವ್ವ ಮತ್ತು ಇತರ ಕಥೆಗಳು.* ಬಸವ ಪ್ರಕಾಶನ.
- ಗೀತಾ ನಾಗಭೂಷಣ. (೨೦೧೦). ಇದು *ಎಂಥಾ ಲೋಕವಯ್ಯ.* ಕನ್ನಡ ನಾಡು ಪ್ರಕಾಶನ.
- ಗೀತಾ ನಾಗಭೂಷಣ. (೨೦೦೬). *ಖ್ಯಾದಗಿ ಬನದಾಗ.* ಸಿ.ವಿ.ಜಿ. ಪಬ್ಲಿಕೇಶನ್, ಬೆಂಗಳೂರು.
- ಚೆನ್ನಣ್ಣ ವಾಲಿಕಾರ. (೧೯೭೮). *ಕಪ್ಪು ಕಥೆಗಳು.* ಹೈದರಾಬಾದ ಕರ್ನಾಟಕ ದಲಿತ ಸಂಘರ್ಷ ಸಮೀತಿ,
- ಚೆನ್ನಣ್ಣ ವಾಲಿಕಾರ. (೧೯೯೦). *ಕತ್ತಲಲ್ಲಿ ಕುದ್ದವರ ಕಥೆಗಳು.* ಶಿವಪುರ ಪ್ರಕಾಶನ.
- ಜಯತೀರ್ಥ ರಾಜಪುರೋಹಿತ. (೧೯೭೦). ಪಾರವ್ವನ ಪಂಚಾಯಿತಿ. ನೃಪತುಂಗ ಪ್ರಕಾಶನ.
- ಜಯತೀರ್ಥ ರಾಜಪುರೋಹಿತ. (೧೯೬೮). ರೋಹಿಣಿ. ಪ್ರಕಾಶ್ ಪ್ರಕಾಶನ.
- ಜಯತೀರ್ಥ ರಾಜಪುರೋಹಿತ. (೧೯೭೪). *ಮೌಲ್ಯಗಳು.* ಶ್ರೀ ಪ್ರಕಾಶನ.
- ರಾಜಶೇಖರ ನೀರಮಾನ್ವಿ. (೨೦೧೨). ಸಮಗ್ರ ಕಥೆಗಳು. ಲೋಹಿಯಾ ಪ್ರಕಾಶನ.
- ಲಲಿತಾನಾಯಕ ಬಿ.ಟಿ. (೧೯೮೯). ಹಬ್ಬ ಮತ್ತು ಬಲಿ. ಲಂಬಾಣಿ ಒಕ್ಕೂಟ ಪ್ರಕಾಶನ.
- ಶಾಂತರಸ. (೧೯೯೭). ಶಾಂತರಸರ ಸಮಗ್ರ ಕಥೆಗಳು. ಪ್ರಿಯದರ್ಶಿನಿ ಪ್ರಕಾಶನ.
- ಸಗರ ಕೃಷ್ಣಾಚಾರ್ಯ. (೧೯೬೦). ಆದರ್ಶ. ಸಾರ್ವಜನಿಕ ಸಾಹಿತ್ಯ ಮಂದಿರ.